**S.C: 28/2023**
**P.W-1**

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ**

ದಿನಾಂಕಃ 07.03.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದಃ**

ನಾನು ದಿನಾಂಕ 07.03.2026 ರಂದು ನಮ್ಮ ವಕೀಲರ ಮೂಲಕ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಹಾಗೂ ಈ ಕೆಳಗೆ ನಮೂದಿಸಿರುವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಪ್ರಾಮಿಸರಿ ನೋಟ್ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ- 1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿನ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ- 1-ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಪಂಪಾಪತಿ ಎನ್ನುವವರು ಬರೆದಿರುತ್ತಾರೆ. ಸದರಿ ದಾಖಲೆಗೆ ಪಿ. ನಾಗರಾಜ ನಾಯ್ಕ ಮತ್ತು ಗೋಪಾಲ ನಾಯ್ಕ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಲೀಗಲ್ ನೋಟೀಸ್ ನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ- 2 ಎಂದು, ಅಂಚೆ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ- 3 ಎಂದು, ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ- 4 ಎಂದು ಗುರುತಿಸಲಾಯಿತು.

(ಪ್ರತಿವಾದಿ ಏಕಪಕ್ಷೀಯವಾಗಿರುವುದರಿಂದ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**